ಈಗ ಸೈನಿಕನಿಗೆ ಗೊತ್ತಾಯಿತು, ತನ್ನಲ್ಲಿ ಎಂತಹ ಮಾಂತ್ರಿಕ ಪೆಟ್ಟಿಗೆಗಳಿವೆ ಎಂದು. ಒಂದು ಸಾರೆ ತಟ್ಟಿದರೆ ತಾಮ್ರದ ನಾಣ್ಯದ ಪೆಟ್ಟಿಗೆ ತೆರೆದುಕೊಳ್ಳುತ್ತದೆ. ಎರಡು ಸಾರಿ ತಟ್ಟಿದರೆ ಬೆಳ್ಳಿಯ ನಾಣ್ಯದ ಪೆಟ್ಟಿಗೆ ತೆರೆದುಕೊಳ್ಳುತ್ತದೆ. ಮೂರು ಬಾರಿ ತಟ್ಟಿದರೆ ಬಂಗಾರದ ನಾಣ್ಯ ತಂದುಕೊಡುವ ಪೆಟ್ಟಿಗೆ ತೆರೆಯುತ್ತದೆ.

ಈ ಗುಟ್ಟು ಅರಿತ ನಂತರ ಸೈನಿಕನ ಜೀವನ ಕ್ರಮ ಮೊದಲಿನಂತೆಯೇ ವಿಲಾಸಿತನದಲ್ಲಿ ಸಾಗಿತು. ಅವನು ಪುನಃ ವಿಶಾಲವಾದ ಮನೆ, ಒಳ್ಳೆಯ ವಸ್ತ್ರಗಳು, ಆಭರಣಗಳು, ಸ್ನೇಹಿತರು ಬಂದು ಎಲ್ಲಾ ಎಂದಿನಂತಾದವು.

ಹೀಗೆ ಜೀವನ ಸಾಗಿಸುತ್ತಿದ್ದ ಸೈನಿಕನಿಗೆ ಮನದಾಳದಲ್ಲಿ ಒಂದು ಆಸೆ ಹುಟ್ಟಿಕೊಂಡಿತು. ಯಾರೂ ನೋಡದೇ ಇರುವ ರಾಜಕುಮಾರಿಯನ್ನು ನಾನೇಕೆ ಒಮ್ಮೆ ನೋಡಿ ಬಿಡಬಾರದೆಂದು? ಅವಳು ತುಂಬಾ ಸುಂದರಿ ಎಂದು ಎಲ್ಲರೂ ಹೇಳುವುದನ್ನು ಕೇಳಿದ್ದೇನೆ, ಆದರೆ ನೋಡುವುದು ಹೇಗೆ? ಅವಳು ತಾಮ್ರದ ಕೋಟೆಯಲ್ಲಿ ಬಂದಿಯಾಗಿದ್ದಾಳೆ.

ಒಂದು ಮಧ್ಯರಾತ್ರಿ ಸೈನಿಕ ತಾಮ್ರ ತರುವ ಮಾಂತ್ರಿಕ ಪೆಟ್ಟಿಗೆಯನ್ನು ಒಮ್ಮೆ ತಟ್ಟಿದ. ಫುಟ್‌ಬಾಲ್ ಗಾತ್ರದ ಕಣ್ಣುಗಳುಳ್ಳ ನಾಯಿ ಬಂದು ಎದುರು ನಿಂತಿತು. 'ಈಗ ಮಧ್ಯರಾತ್ರಿ, ನಾನು ರಾಜಕುಮಾರಿಯನ್ನು ಒಂದು ಕ್ಷಣ ನೋಡಬಯಸುತ್ತೇನೆ' ಎಂದ... ತಕ್ಷಣ ನಾಯಿ ಹೊರ ನಡೆಯಿತು. ಸೈನಿಕನು ನಂಬಲು ಸಾಧ್ಯವೇ ಇಲ್ಲ ಎನ್ನುವ ಹಾಗೆ, ಕೆಲವೇ ಕ್ಷಣದಲ್ಲಿ ನಾಯಿ ರಾಜಕುಮಾರಿಯನ್ನು ಬೆನ್ನಮೇಲೆ ಇರಿಸಿಕೊಂಡು ಬಂದೇ ಬಿಟ್ಟಿತು. ರಾಜಕುಮಾರಿ ಗಾಢ ನಿದ್ರೆಯಲ್ಲಿ ಇದ್ದಳು. ಸೈನಿಕ ನೋಡಿದ, ನಿಜಕ್ಕೂ ಅವಳು ಅನುಪಮ ಸುಂದರಿಯಾಗಿದ್ದಳು, ಕೋಮಲವಾಗಿದ್ದಳು. ಅವನು ಎಷ್ಟೆಂದರೂ ಓರ್ವ ಸೈನಿಕ. ರಾಜಕುಮಾರಿಯನ್ನು ನೋಡಿ ಅವಳಿಗೆ ಒಂದು ಮುತ್ತು ಕೊಟ್ಟು ಕಳುಹಿಸಿಕೊಟ್ಟ. ನಾಯಿ ಪುನಃ ಅವಳನ್ನು ಅರಮನೆಗೆ ತಂದು ಸೇರಿಸಿತು.

ಮಾರನೆಯ ದಿನ ಬೆಳಿಗ್ಗೆ ರಾಜರಾಣಿಯರಿಬ್ಬರು ಪ್ರಾತಃಕಾಲದ ಉಪಾಹಾರಕ್ಕೆ ಕುಳಿತ ಸಮಯಕ್ಕೆ ರಾಜಕುಮಾರಿ ತನಗೆ ಬಿದ್ದ ಒಂದು ವಿಚಿತ್ರವಾದ ಕನಸಿನಲ್ಲಿ ನಿನ್ನೆ ರಾತ್ರಿ ಒಂದು ನಾಯಿ ಬಂದು ತನ್ನನು ಅದರ ಬೆನ್ನ ಮೇಲೆ ಹೊತ್ತು ಕೊಂಡು ಹೋಗಿ ಅಲ್ಲಿ ಒಬ್ಬ ಸೈನಿಕನ ಮನೆಗೆ ತೆಗೆದುಕೊಂಡು ಹೋದಂತೆ, ಅಲ್ಲಿ ಆ ಸೈನಿಕ ತನಗೆ ಮುತ್ತು ಕೊಟ್ಟಂತೆ ತನಗೆ ಕನಸಾಯಿತೆಂದು ತಿಳಿಸಿದಳು. ಅದನ್ನು ಕೇಳಿದ ರಾಣಿ, ಹೋಗಲಿ ಬಿಡು ಅದೊಂದು ಒಳ್ಳೆಯ ಕಥೆ ಎಂದು ತೇಲಿಸಿಬಿಟ್ಟಳು...

ಆದರೆ, ಮಾರನೆಯ ರಾತ್ರಿ, ಓರ್ವ ಅರಮನೆಯ ವಯಸ್ಕದಾಸಿಯನ್ನು ರಾಜಕುಮಾರಿಯ ಹಾಸಿಗೆಯ ಪಕ್ಕದಲ್ಲಿಯೇ ಎಚ್ಚರಿಕೆಯಿಂದ ಕಾಯಲು ಇರಿಸಲಾಯಿತು. ಏಕೆಂದರೆ ಇದು ಕೇವಲ ಕನಸೇ ಅಥವಾ ಇದರಲ್ಲಿ ಏನಾದರೂ ನಿಜವಾದದ್ದು ಇದೆಯೇ ಎಂದು ರಾಣಿ ನೋಡಬಯಸಿದಳು. ಮಾರನೆಯ ದಿನದರಾತ್ರಿಯೂ ಸೈನಿಕ ರಾಜಕುಮರಿಯನ್ನು ನೋಡಲು ಉತ್ಸುಕನಾಗಿದ್ದ. ಪುನಃ ಅದೇ ನಾಯಿ ಅರಮನೆಗೆ ಬಂದು ರಾಜುಕುಮಾರಿಯನ್ನು ತನ್ನ ಬೆನ್ನ ಮೇಲೆ ಹೇರಿಕೊಂಡು ಓಡಿತು. ಮುದುಕಿಯೂ ಸಹ ಅದರ ಹಿಂದೆಯೇ ಓಡಿದಳು. ನಾಯಿ ತನ್ನ ಮನೆಯನ್ನು ಸೇರಿ ಮಾಯವಾಯಿತು. ಈಗ ಆ ಮುದುಕಿದಾಸಿಗೆ ರಾಜಕುಮಾರಿ ಹೋಗಿರುವುದೆಲ್ಲಿಗೆ ಎನ್ನುವುದು ಗೊತ್ತಾಯಿತು. ಆ ಮನೆಯ ಬಾಗಿಲಿನ ಮೇಲೆ ಒಂದು ಬಳಪದ ಚಿಹ್ನೆಯನ್ನು ಬರೆದು ಅರಮನೆಗೆ ಬಂದು ನಿದ್ರೆ ಮಾಡಿದಳು. ಸ್ವಲ್ಪ ಹೊತ್ತಿನ ನಂತರ